ಶಿಕ್ಷಕರ ಮತ್ತು ಪೋಷಕರ ಅಂಕಣ

ಶಿಕ್ಷಣ

## ಆದರ್ಶಗಳ ಅನುಷ್ಠಾನ – ೩

(ತ್ಯಾಗ ಮತ್ತು ಸೇವೆಗಳೇ ನಮ್ಮ ದೇಶದ ಆದರ್ಶಗಳು. ಅವುಗಳನ್ನು ಅನುಷ್ಠಾನಗೊಳಿಸುವ ವಿಧಾನಗಳು ಹೀಗಿವೆ: ೧. ಉತ್ಕಟ ಬಯಕೆ ೨. ಸುಖಾನುಭವದ ಸಂಸ್ಕರಣ ೩. ನೈತಿಕತೆಯ ಪ್ರತಿಜ್ಞೆಯನ್ನು ಕೈಗೊಳ್ಳುವುದು ಮತ್ತು ಪ್ರಾರ್ಥನೆ ೪. ಕರ್ಮಯೋಗದ ಅನುಷ್ಠಾನ ಮತ್ತು ೫. ಸಾಮಾಜಿಕ ಜೀವನದಲ್ಲಿ ಮೌಲ್ಯಗಳನ್ನು ಚಾಚೂತಪ್ಪದೆ ಅನುಸರಿಸುವುದು. ಅವುಗಳಲ್ಲಿ ಮೂರು ವಿಧಾನಗಳನ್ನು ಹಿಂದಿನ ಎರಡು ಸಂಚಿಕೆಗಳಲ್ಲಿ ಚರ್ಚಿಸಲಾಗಿದೆ. ಈ ಸಂಚಿಕೆಯಲ್ಲಿ ಕಡೆಯ ಎರಡು ವಿಧಾನಗಳನ್ನು ಚರ್ಚಿಸಲಾಗುವುದು.)

### ೪. ಕರ್ಮಯೋಗದ ಅನುಷ್ಠಾನ

**ನಿಸ್ವಾರ್ಥ ಕಾರ್ಯದ ಕಲೆ :** ಭಗವದ್ಗೀತೆಯು ನಿಸ್ವಾರ್ಥ ಭಾವನೆಯನ್ನು ತಳೆಯುವ ಅನೇಕ ವಿಧಾನಗಳನ್ನು ಬೋಧಿಸುತ್ತದೆ. ಅಂತಹ ಒಂದು ವಿಧಾನವೆಂದರೆ, ಕೆಲಸದಲ್ಲಿ ಉತ್ಕೃಷ್ಟತೆಯನ್ನು ಸಾಧಿಸಲು ಪ್ರಯತ್ನಿಸುವುದು. ಈಗ ನೀವು ಕೈಗೊಂಡಿರುವ ಕೆಲಸದಲ್ಲಿ ಸಂಪೂರ್ಣವಾಗಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಿ. ಈ ಬಗೆಯ ಏಕಮುಖಿಯಾದ ನಿಷ್ಠೆಯು ತಾನೇ ತಾನಾಗಿ, ಎಲ್ಲ ಬಗೆಯ ಸೆಳೆತಗಳನ್ನು ತ್ಯಜಿಸುವಂತೆಯೂ ಮತ್ತು ನಿಮ್ಮ ಧ್ಯೇಯೋದ್ದೇಶಗಳನ್ನು ಸಂಸ್ಕರಿಸುವಂತೆಯೂ ಮಾಡುತ್ತದೆ. ಈ ಕಾರ್ಯದಲ್ಲಿ ಸಾಧಿಸಿದ ದಕ್ಷತೆಯು ಸಮಾಜಕ್ಕೆ ಸೇವೆಯಾಗಿ ಪರಿಣಮಿಸುತ್ತದೆ.

ಭಗವಂತನನ್ನು ನಂಬುವವರಿಗೆ ಆಸಕ್ತಿಯನ್ನು ಬಿಡುವುದು ಬಹಳ ಸುಲಭದ ಕೆಲಸ. ಅವರು ಸರ್ವೇಶ್ವರನಿಗೆ ತಮ್ಮ ಕಾರ್ಯಗಳ ಫಲಗಳನ್ನು ನಿವೇದಿಸುವರು. ನಿಮ್ಮನ್ನು ನೀವು ಭಗವಂತನ ಸೇವಕನೆಂದು ಭಾವಿಸಿಕೊಳ್ಳಿ. ಕೆಲಸವನ್ನು ಅವನನ್ನು ತೃಪ್ತಿಪಡಿಸುವ ಬಗೆಯೆಂದು ಭಾವಿಸಿಕೊಳ್ಳಿ. ನಿಮ್ಮ ಕುಟುಂಬ, ಸ್ನೇಹಿತರು ಮತ್ತು ಸಮಾಜ – ಇವೆಲ್ಲಕ್ಕೂ ಕೆಲವು ಜವಾಬ್ದಾರಿಗಳನ್ನು ಆ ಭಗವಂತನೇ ನಿಮ್ಮ ಮೇಲೆ ಹೊರಿಸಿದ್ದಾನೆ. ಈ ರೀತಿಯಲ್ಲಿ ಕಾರ್ಯವು ಒಂದು ಯಜ್ಞವಾಗುತ್ತದೆ.

ನೀವು ದೇವರನ್ನು ನಂಬದಿದ್ದರೆ ಅಥವಾ ಯಾವ ಹೊರಗಿನ ಸಹಾಯವನ್ನೂ ಅವಲಂಬಿಸದಿದ್ದರೆ, ನಿರಾಸಕ್ತಿಯ ಭಾವನೆಯನ್ನು ನಿಮ್ಮ ಮನಸ್ಸಿನ ಶಕ್ತಿ ಮತ್ತು ವಿವೇಕ ಬುದ್ಧಿಗಳ ಆಧಾರದ ಮೇಲೆಯೇ ಸಾಧಿಸಬೇಕಾಗುವುದು. ಆಗ ನೀವು "ನಾನು ನಿರಾಸಕ್ತಿಯ ಭಾವನೆಯನ್ನು ಹೊಂದಬೇಕು" ಎನ್ನುವ ಪ್ರಬಲ ಇಚ್ಛಾಶಕ್ತಿಯನ್ನು ಹೊಂದಿರಬೇಕಾಗುತ್ತದೆ.

### ೫. ಸಾಮಾಜಿಕ ಜೀವನದಲ್ಲಿ ಮೌಲ್ಯಗಳನ್ನು ಚಾಚೂ ತಪ್ಪದೆ ಅನುಸರಿಸುವುದು

ನೀವು ನಂಬಿಕೊಂಡ ಮೌಲ್ಯಗಳನ್ನು ಬಿಟ್ಟುಕೊಡದೆ, ನಿಮ್ಮ ಸುತ್ತಲ ಜನರೊಂದಿಗೆ ಸಂವಹಿಸುವ ಕಲೆಯನ್ನು ನೀವು ಕರಗತಗೊಳಿಸಿಕೊಂಡಾಗ, ಸೇವಾದರ್ಶವನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಾದ ಸ್ವಾಮಿ ತುರೀಯಾನಂದರು ತಮ್ಮ ಭಕ್ತರಿಗೆ ಹೀಗೆ ಸಲಹೆಯನ್ನು ನೀಡುತ್ತಾರೆ: "ನಿಮ್ಮ ಅಭಿಪ್ರಾಯಗಳ ವಿಷಯದಲ್ಲಿ ಪ್ರವಾಹದೊಂದಿಗೆ ಈಜಿಕೊಂಡು ಹೋದರೂ, ಜೀವನ ಮೌಲ್ಯಗಳ ವಿಷಯದಲ್ಲಿ, ಶಿಲೆಯಂತೆ ಸ್ಥಿರನಾಗಿರು." ಮೌಲ್ಯಗಳೆಂದರೆ ಬದುಕಿನ ಸಾರಭೂತ ವಿಷಯಗಳು. ಸತ್ಯ, ಅಹಿಂಸೆ, ಬ್ರಹ್ಮಚರ್ಯ, ದಾನ, ನಿಸ್ವಾರ್ಥತೆ, ಸಹನೆ, ಶಿಸ್ತು ಮುಂತಾದವು ಜೀವನದಲ್ಲಿ ಪ್ರಮುಖವಾದ ಮೌಲ್ಯಗಳು. ಅಭಿಪ್ರಾಯಗಳೆಂದರೆ, ಅಮುಖ್ಯವಾದ ವಿಷಯಗಳು. ಯಾರು ಒಳ್ಳೆಯ ಆಟಗಾರ? ಇಂದು ಯಾವ ಪೋಷಾಕನ್ನು ಧರಿಸಿಕೊಳ್ಳಬೇಕು? ಮುಂತಾದವು.

ನಾವು ದಿನನಿತ್ಯದ ಜೀವನದಲ್ಲಿ ಭೇಟಿಯಾಗುವ ವಿವಿಧ ಬಗೆಯ ಜನರ ಜೊತೆಗೆ ವ್ಯವಹರಿಸುವಾಗ, ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳುವುದು ಹೇಗೆ? ಒಂದು ಪತಂಜಲಿ ಯೋಗ ಸೂತ್ರವು ಇಂಥ ಸಮಯದಲ್ಲಿ ಇಟ್ಟುಕೊಳ್ಳಬೇಕಾದ ಮನೋಭಾವಗಳನ್ನು ಹೀಗೆ ಪಟ್ಟಿ ಮಾಡುತ್ತದೆ:

"ಸಂತೋಷವಾಗಿರುವವರಲ್ಲಿ ಮೈತ್ರಿ, ದುಃಖಿಗಳಲ್ಲಿ ಅನುಕಂಪೆ, ಸಜ್ಜನರ ಏಳಿಗೆಯನ್ನು ಕಂಡು ಸಂತೋಷ ಮತ್ತು ದುಷ್ಟರನ್ನು ಕಂಡರೆ ಉದಾಸೀನತೆಗಳನ್ನು ಬೆಳೆಸಿಕೊಳ್ಳಬೇಕು." ( ಸಮಾಧಿಪಾದ, ೩೩)

ಇದನ್ನು ವಿವರಿಸುತ್ತ ಸ್ವಾಮಿ ವಿವೇಕಾನಂದರು ಹೀಗೆನ್ನುತ್ತಾರೆ:

"ನಮಗೆ ಅಂತಹ ನಾಲ್ಕು ಭಾವನೆಗಳು ಇರಬೇಕು. ಎಲ್ಲರಿಗೂ ನಾವು ಮಿತ್ರರಾಗಿರಬೇಕು. ದುಃಖದಲ್ಲಿರುವವರಿಗೆ ಕರುಣೆ ತೋರಬೇಕು. ಜನರು ಸಂತೋಷದಿಂದಿರುವಾಗ, ನಾವು ಅದನ್ನು ನೋಡಿ ಸಂತೋಷಪಡಬೇಕು. ದುಷ್ಟರನ್ನು ಕಂಡರೆ ಉದಾಸೀನರಾಗಿರಬೇಕು. ನಮ್ಮೆದುರಿಗೆ ಬರುವ ಎಲ್ಲಾ ಸಂಗತಿಗಳ ವಿಷಯದಲ್ಲಿಯೂ ಹೀಗೆಯೇ ವರ್ತಿಸಬೇಕು. ಅದು ಸಂತೋಷದಿಂದ ಕೂಡಿದ್ದರೆ, ಅದನ್ನು ಸೌಹಾರ್ದದಿಂದ ನೋಡಬೇಕು; ದುಃಖದಿಂದ ಕೂಡಿದ್ದರೆ, ಸೌಹಾರ್ದದಿಂದಲೂ, ಒಳ್ಳೆಯದಾಗಿದ್ದರೆ ಸಂತೋಷದಿಂದಲೂ ನೋಡಬೇಕು. ಅದು ಕೆಟ್ಟದಾಗಿದ್ದರೆ, ಮನಸ್ಸಿಗೆ ಹಚ್ಚಿಕೊಳ್ಳಬಾರದು. ಅನೇಕ ವಿಷಯಗಳು ಮನಸ್ಸಿಗೆ ಬರುತ್ತಿರುವಾಗ, ಇಂತಹ ಸ್ಥಿತಿಯನ್ನು ಕಾಪಾಡಿಕೊಂಡರೆ, ಮನಸ್ಸಿಗೆ ಶಾಂತಿ ದೊರಕುವುದು." (ರಾಜಯೋಗ, ಪುಟ ೧೦೭)

ರಾಜಯೋಗವು ಮನಸ್ಸಿನ ಸ್ವಭಾವ ಮತ್ತು ಅದರ ಕಾರ್ಯಗಳ ಬಗ್ಗೆ ವಿಶ್ಲೇಷಣೆ ಮಾಡುವ ಶಾಸ್ತ್ರ. ಅದರ ಅಧ್ಯಯನದಿಂದ ನೈತಿಕತೆಯ ಅನುಷ್ಠಾನವು ಸುಲಭವಾಗುವುದು. ಉದಾಹರಣೆಗೆ, ಯೋಗಸೂತ್ರಗಳು ನಕಾರಾತ್ಮಕ ಭಾವನೆಗಳನ್ನು ನಿವಾರಿಸುವ ಅನುಷ್ಠಾನಯೋಗ್ಯ ವಿಧಾನವೊಂದನ್ನು ನಮಗೆ ಹೇಳಿಕೊಡುತ್ತದೆ. ಸ್ವಾಮಿ ವಿವೇಕಾನಂದರು ಅದಕ್ಕೆ ಹೀಗೆ ವಿವರಣೆ ನೀಡುತ್ತಾರೆ:

"ಉದಾಹರಣೆಗೆ, ಮನಸ್ಸಿನಲ್ಲಿ ಕೋಪದ ಒಂದು ಅಲೆ ಇದೆ ಎಂದಿಟ್ಟುಕೊಳ್ಳೋಣ. ಅದನ್ನು ನಾವು ಹೇಗೆ ತಾನೇ ನಿಗ್ರಹಿಸುವುದು? ಅದಕ್ಕೆ ವಿರುದ್ಧವಾದ ಮತ್ತೊಂದು ದೊಡ್ಡ ಅಲೆಯನ್ನು (ಮನಸ್ಸಿನಲ್ಲಿ) ಎಬ್ಬಿಸುವುದರಿಂದ. ಪ್ರೀತಿಯ ಬಗ್ಗೆ ಚಿಂತಿಸಿ. ತಾಯಿಗೆ ತನ್ನ ಪತಿಯ ಮೇಲೆ ಹಲವು ಬಾರಿ ತುಂಬಾ ಕೋಪ ಬರುವುದು. ಆ ಸಮಯದಲ್ಲಿ ಮಗು ಬರುತ್ತದೆಯೆಂದುಕೊಳ್ಳಿ, ಅವಳು ಅದನ್ನು ಮುದ್ದಿಸುವಳು. ಆಗ ಕೋಪದ ಹಳೆಯ ಅಲೆ ಮಾಯವಾಗಿ, ಪ್ರೇಮದ ಹೊಸ ಅಲೆ ಏಳುವುದು. ಪ್ರೀತಿ ದ್ವೇಷಕ್ಕೆ ವಿರುದ್ಧವಾದುದು. ಆದಕಾರಣ ನಾವು ಯಾವುದನ್ನು ತಿರಸ್ಕರಿಸಬೇಕೆಂದು ಬಯಸುವೆವೋ, ಅದಕ್ಕೆ

ವಿರುದ್ಧವಾಗಿರುವ ಅಲೆಗಳನ್ನು ಮನಸ್ಸಿನಲ್ಲಿ ಎಬ್ಬಿಸುವುದರಿಂದ, ಅದನ್ನು ನಿವಾರಿಸಲು ಸಾಧ್ಯವೆಂದು ನಮಗೆ ತೋರುತ್ತದೆ.... ಕದಿಯುವ ಆಲೋಚನೆ ಬಂದಾಗ ಕದಿಯದೆ ಇರುವ ಆಲೋಚನೆಯನ್ನು ಮಾಡಬೇಕು. ಒಬ್ಬನಿಂದ ಕೊಡುಗೆ ಸ್ವೀಕರಿಸುವ ಯೋಚನೆ ಬಂದಾಗ, ಅದನ್ನು ಸ್ವೀಕರಿಸದಿರುವ ಆಲೋಚನೆಯನ್ನು ಮಾಡಬೇಕು." (ರಾಜಯೋಗ, ಪುಟ ೧೪೬)

ತ್ಯಾಗ ಮತ್ತು ಸೇವೆಗಳೆಂಬ ಅವಳಿ ಆದರ್ಶಗಳನ್ನು ಅನುಷ್ಠಾನ ಗೊಳಿಸುವ ಸಂದೇಶವು ಸದ್ಯದ ಸಾಮಾಜಿಕ ಪರಿಸ್ಥಿತಿಯಲ್ಲಿ ಅವಾಸ್ತವ ವಾದುದು ಮತ್ತು ಅಸ್ವಾಭಾವಿಕವಾದುದು ಎಂದೆನಿಸಬಹುದು. ಆದರೆ, ನಾವು ಈ ವಿಚಾರದಲ್ಲಿ ವ್ಯಾಸ ಮಹರ್ಷಿಗಳ ಈ ಮಾತನ್ನು ಪಾಲಿಸುವುದು ಒಳಿತು: "ಧರ್ಮದ ಪಥದಲ್ಲಿ ಮುಂದುವರಿದರೆ, ಒಬ್ಬನು ಅರ್ಥವನ್ನೂ ಗಳಿಸಿಕೊಳ್ಳಬಹುದು ಮತ್ತು ಕಾಮನೆಗಳನ್ನೂ ತೀರಿಸಿಕೊಳ್ಳಬಹುದು" (ಮಹಾಭಾರತ, ೧೮:೫:೪೯). ಇಲ್ಲಿ ಧರ್ಮವೆಂದರೆ, ಸದಾಚಾರ, ವಿಶ್ವವ್ಯಾಪಿ ನೈತಿಕ ನಿಯಮ.

ಪೋಷಕರಾಗಿ ಅಥವಾ ಶಿಕ್ಷಕರಾಗಿ, ತ್ಯಾಗ ಮತ್ತು ಸೇವೆಗಳೆಂಬ ಈ ಅವಳಿ ಆದರ್ಶಗಳನ್ನು ನೀವು ಅನುಷ್ಠಾನಕ್ಕೆ ತರಬೇಕು. ಆಗ ನಿಶ್ಶಬ್ದವಾಗಿ ಆದರೆ ಖಂಡಿತವಾಗಿ ನಿಮ್ಮ ಮಕ್ಕಳ ಮತ್ತು ವಿದ್ಯಾರ್ಥಿಗಳ ಚಾರಿತ್ರ್ಯನಿರ್ಮಾಣದ ಮೇಲೆ ನೀವು ಗಾಢವಾದ ಪ್ರಭಾವವನ್ನು ಬೀರುತ್ತೀರಿ. (ಕೃಪೆ: Parents and Teachers in Value Education, Publisher: Ramakrishna Mission, Belur Math)

**(ಮುಂದಿನ ತಿಂಗಳು: ಉಪಾಧ್ಯಾಯರಿಗಾಗಿ ಮಾರ್ಗದರ್ಶಿ ಸೂತ್ರಗಳು)**

## ದಿವ್ಯಸ್ಮೃತಿಪ್ರಭ

ಒಮ್ಮೆ ಸ್ವಾಮಿ ಶಿವಾನಂದರು ನೀಲಗಿರಿಯ ಬೆಟ್ಟಗಳಲ್ಲಿ ತಮ್ಮ ಸೇವಕ ನೊಡನೆ ಗಾಳಿ ಸೇವನೆಗಾಗಿ ಹೊರಟರು. ದಾರಿಯಲ್ಲಿ ಪಾಶ್ಚಾತ್ಯ ಕ್ರಿಶ್ಚಿಯನ್ ಮಹಿಳೆಯೊಬ್ಬಳು ಇದಿರಾದಳು. ಸ್ವಾಮಿಗಳು ಸ್ನೇಹಪರ ಧ್ವನಿಯಲ್ಲಿ 'ನಮಸ್ಕಾರ' ಎಂದರು. ಆದರೆ ಆ ಮಹಿಳೆ ಅವರನ್ನು ದುರುಗುಟ್ಟಿಕೊಂಡು ತಿರಸ್ಕಾರ ಭಾವದಿಂದ ನೋಡಿ, ನಮಸ್ಕಾರವನ್ನೂ ಮಾಡದೆ ಮುಖವನ್ನು ತಿರುಗಿಸಿಕೊಂಡು ಹೊರಟು ಹೋದಳು. ನೀಲಗಿರಿಯ ಬೆಟ್ಟಗಳಲ್ಲಿ ಬಡವರಿಗಾಗಿ ರಾಮಕೃಷ್ಣ ಮಿಷನ್ ನಡೆಸುತ್ತಿದ್ದ ಸೇವೆಯನ್ನು ಕಂಡು ಸಿಟ್ಟು ಆಕೆಗೆ! ಸ್ವಾಮೀಜಿಯವರ ಸೇವಕನಿಗೆ ಆ ಮಹಿಳೆಯ ವರ್ತನೆಯಿಂದ ದುಃಖ ವಾಯಿತು. "ಮಹಾರಾಜ್! ನೀವು ಏಕೆ ಅವಳಿಗೆ ನಮಸ್ಕಾರ ಮಾಡಿ ದಿರಿ? ಅವಳು ನಿಮಗೆ ಅವಮಾನ ಮಾಡಿದಳು!" ಎಂದನು. ಸ್ವಾಮಿ ಶಿವಾನಂದಜಿ ಅವರು ಶಾಂತ ಭಾವದಿಂದ ಉತ್ತರಿಸಿದರು: **" ಪರವಾಗಿಲ್ಲ, ಬಿಡು! ಪ್ರಪಂಚದಲ್ಲಿರುವ ಎಲ್ಲ ಮಹಿಳೆಯರಿಗೂ ನಾವು ಗೌರವ ಸಲ್ಲಿಸಬೇಕು. ಜಗದ್ಧಾತ್ರಿಯು ಎಲ್ಲರಲ್ಲೂ ಪ್ರಕಟ ವಾಗಿದ್ದಾಳೆ."**

***

ಇದೂ ಕೂಡ ನೀಲಗಿರಿಯಲ್ಲಿ ನಡೆದ ಘಟನೆಯೇ ಆಗಿದೆ. ಸ್ವಾಮಿ ಶಿವಾನಂದರ ದರ್ಶನಕ್ಕಾಗಿ ಮುಂಬಯಿನಿಂದ ಮುಸಲ್ಮಾನ ವೈದ್ಯರೊಬ್ಬರು ತಮ್ಮ ಪತ್ನಿ ಮತ್ತು ಮಕ್ಕಳೊಡನೆ ಬಂದರು. ಅವರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸವನ್ನು ಪಡೆದವರು. ಮಾತಿನ ನಡುವೆ ವೈದ್ಯರು, "ನನ್ನ ಪತ್ನಿಯು ನಿಮ್ಮೊಡನೆ ಮಾತನಾಡಲು ಕಾತುರ ಳಾಗಿದ್ದಾಳೆ" ಎಂದರು. ಆಕೆಯು ಶ್ರದ್ಧಾಭಕ್ತಿಗಳಿಂದ ಸ್ವಾಮಿಗಳಿಗೆ ನಮಸ್ಕರಿಸಿ, ತನ್ನ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಪಟ್ಟ ಅನೇಕ ರಹಸ್ಯಗಳನ್ನು ಹೇಳಿಕೊಂಡಳು. ಅವಳು ಅನೇಕ ಬಾರಿ ಶ್ರೀಕೃಷ್ಣನ ದರ್ಶನವನ್ನು ಪಡೆದಿದ್ದಳು. ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶ ಗಳನ್ನು ಓದಿದ ಮೇಲೆ, ಶ್ರೀಕೃಷ್ಣನೇ ಶ್ರೀರಾಮಕೃಷ್ಣರಾಗಿ ಜನಿಸಿದ್ದಾರೆಂಬ ದೃಢನಂಬಿಕೆ ಅವಳದಾಗಿತ್ತು. ಹೊರಡುವ ಸಮಯದಲ್ಲಿ ಸ್ವಾಮಿಗಳ ಪಾದಗಳ ಮೇಲೆ ಮಂಡಿಯೂರಿ ಕುಳಿತು ಹೀಗೆ ಪ್ರಾರ್ಥಿಸಿಕೊಂಡಳು: **" ದಯವಿಟ್ಟು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿ. ಶ್ರೀರಾಮಕೃಷ್ಣರ ಸಂಗಡ ಇರುವ ಸೌಭಾಗ್ಯವು ನಿಮಗೆ ದೊರೆತಿತ್ತು. ಅದಲ್ಲದೆ ಅವರ ಕೃಪೆಗೆ ಕೂಡ ನೀವು ಪಾತ್ರರಾಗಿರುವಿರಿ. ಶ್ರೀಗುರುದೇವರನ್ನು ಸ್ಪರ್ಶಿಸಿದ ಆ ಕೈಗಳಿಂದ ನನ್ನ ತಲೆಯನ್ನು ಒಮ್ಮೆ ಸ್ಪರ್ಶಿಸಿ."** ಹೀಗೆ ಹೇಳುತ್ತಾ ಅವಳು ಧಾರಾಕಾರವಾಗಿ ಕಣ್ಣೀರು ಸುರಿಸಿದಳು.

***

ಸ್ವಾಮಿ ವಿವೇಕಾನಂದರ ಪಾಶ್ಚಾತ್ಯ ಭಕ್ತೆಯಾದ ಜೋಸೆಫಿನ್ ಮೆಕ್ಲೌಡ್ ಬೇಲೂರು ಮಠದ ಅತಿಥಿ ಗೃಹದಲ್ಲಿದ್ದಾಗ, ಒಂದು ರಾತ್ರಿ ಕಳ್ಳನೊಬ್ಬ ಆಕೆಯ ಕೊಠಡಿಗೆ ನುಗ್ಗಿದ. ಆಕೆ ಇಟ್ಟುಕೊಂಡಿದ್ದ, ಸ್ವಾಮಿ ವಿವೇಕಾನಂದರ ಕೂದಲಿದ್ದ ಸಂಪುಟವೊಂದನ್ನು ಕದಿಯಲು ಪ್ರಯತ್ನಿಸಿದ. ಜೋಸೆಫಿನ್ ಮೆಕ್ಲೌಡ್ ಕೂಗಿಕೊಂಡಿದ್ದರಿಂದ ಎಚ್ಚರ ಗೊಂಡ ಇತರರು ಅವನ ಕೈಕಾಲುಗಳನ್ನು ಕಟ್ಟಿ ಮೊಗಸಾಲೆಗೆ ತಂದರು. ಸ್ವಾಮಿ ಶಿವಾನಂದರು, ಎಂದಿನಂತೆ ಗಾಳಿಸೇವನೆಗೆ ಬಂದವರು, ಕಳ್ಳನನ್ನು ನೋಡಿದರು. "ಕದಿಯಲು ಇದೊಂದು ಸ್ಥಳವೇ?" ಎಂದು ತಮಾಶೆಯಾಗಿ ಕೇಳಿದರು.

ನಂತರ ಮೆಕ್ಲೌಡ್, " ಆ ಕಳ್ಳ ಭಕ್ತನಿರಬೇಕು. ಬೇರೆ ಏನನ್ನೂ ಕದಿಯದೇ, ಆ ಸಂಪುಟಕ್ಕೆ ಮಾತ್ರ ಕೈಹಾಕಿದ್ದ" ಎಂದರು. ಸ್ವಾಮಿ ಶಿವಾನಂದರು ಮಗುವಿನಂತೆ ಆ ಮಾತುಗಳನ್ನು ನಂಬಿಬಿಟ್ಟರು. ಒಡನೇ ಆ ಕಳ್ಳನನ್ನು ಬಿಡುಗಡೆ ಮಾಡಿಸಿ, ಗಂಗಾಸ್ನಾನ ಮಾಡುವಂತೆ ಹೇಳಿ, ಉಟ್ಟುಕೊಳ್ಳಲು ಹೊಸ ಬಟ್ಟೆಗಳನ್ನೂ ಕೊಟ್ಟರು! ನಂತರ ತಮಗೆ ನಮಸ್ಕರಿಸಲು ಬಂದ ಅವನಿಗೆ, " ಏನಪ್ಪಾ, ಸಂನ್ಯಾಸಿ ಯಾಗುತ್ತೀಯಾ?" ಎಂದು ಪ್ರೀತಿಯಿಂದ ಛೇಡಿಸಿದರು!

ಅದಕ್ಕೆ ಅವನು ಏನು ಉತ್ತರ ಕೊಟ್ಟನೋ ತಿಳಿಯದು. ಆದರೆ ಕಳ್ಳನ ಜೀವನದಲ್ಲಿ ಇದು ಮರೆಯಲಾಗದ ಘಟನೆ ಎನ್ನುವುದು ಮಾತ್ರ ಸತ್ಯ.